O.S. No: 336/2016
P.W:1

ದಿನಾಂಕಃ 04-06-2025 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಕೆ.ಎನ್.ಎಸ್. ವಕೀಲರಿಂದಃ**

ನನ್ನ ತಂದೆ ಹೇಗೆ ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತು. ನನ್ನ ತಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು. ದಾವಾ ಆಸ್ತಿ ನನ್ನ ತಂದೆಗೆ ಡಿ.ಆರ್ .ನಂ.5193/1971-72 ರಂತೆ ಮಂಜೂರಾಗಿತ್ತು. ನನ್ನ ತಂದೆ ದರ್ಖಾಸು ಮಂಜೂರಾತಿಗೆ ಆರ್ಜಿ ಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ದರ್ಖಾಸು ಮಂಜೂರಾತಿ ಆಗಬೇಕಾದರೆ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದರೆ ಆ ಬಗ್ಗೆ ಆ ಸಮಯ ನನಗೆ ಗೊತ್ತಿಲ್ಲ. ಈಗ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಕಂಡು ಬರುವ ಕಾಶ್ಮೀರ ಸೋಜ ಎನ್ನುವವರು ನನ್ನ ತಂದೆ . ಸದರಿ ದಾಖಲೆಯನ್ನು ನಿ.ಡಿ.16 ಎಂದು ಗುರುತಿಸಲಾಯಿತು. (ಈ ಸಮಯ ನಿ.ಡಿ.16 ನ್ನು ಅದರಲ್ಲಿರುವ ಹೆಸರು ಸಾಕ್ಷಿಯ ತಂದೆಯ ಹೆಸರು ಆಗಿದ್ದು ಅದರಲ್ಲಿ ಕಂಡು ಬರುವ ಸಹಿಯು ಸಾಕ್ಷಿಯ ತಂದೆಯ ಸಹಿ ಅಲ್ಲ ಎಂದು ವಾದಿ ಪರ ವಕೀಲರು ತಕರಾರು ಎತ್ತಿದ್ದು ಅದರಂತೆ ಸದರಿ ತಕರಾರಿಗೆ ಒಳಪಟ್ಟು ನಿ.ಡಿ.16ನ್ನು ಗುರುತಿಸಲಾಯಿತು. )

ನಿ.ಡಿ.6 ಈಗ ನಾನು ನೋಡುತ್ತಿದ್ದು ಅದು ನನ್ನ ತಂದೆಯವರಿಗೆ ಆದ ಮೂಲ ಸಾಗುವಳಿ ಚೀಟಿ ಆಗಿರುತ್ತದೆ. ನಿ.ಡಿ.6 ನ್ನು ನಾನು ಇದುವರೆಗೆ ನೋಡಿದೆ. ಯಾವಾಗ ಕೊನೆಯ ಬಾರಿ ನೋಡಿದೆ ಎಂದು ನನಗೆ ನೆನಪಿಲ್ಲ. ತಂದೆ ಇರುವಾಗ ನಿ.ಡಿ.6 ನ್ನು ಮನೆಯಲ್ಲಿ ನೋಡಿದೆ. ನಿಮ್ಮ ತಂದೆಯವರು ಹುಕ್ಕಪ್ಪ ಗೌಡರಿಗೆ ಯಾವಾಗ ನಿ.ಡಿ.6 ನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದರ್ಖಾಸು ಕೊಡುವ ಮೊದಲು ನನ್ನ ತಂದೆಯವರು ಗ್ರಾಮಕರಣಿಕರ ಮುಂದೆ ಹೇಳಿಕೆ ನೀಡಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರಿಗೆ ದರ್ಖಾಸು ಮಂಜೂರಾದ ವಿಚಾರ ನನಗೆ ಗೊತ್ತು. ದರ್ಖಾಸು ವ್ಯವಹರಣೆಯಲ್ಲಾದ ವಿಚಾರ ತಿಳಿದಿದೆ ಎಂದರೆ ಸಾಕ್ಷಿ ನಾನು ದೊಡ್ಡವನಾದ ಮೇಲೆ ನನಗೆ ವಿಚಾರ ತಿಳಿದಿತ್ತು ಎಂದು ನುಡಿಯುತ್ತಾರೆ. 10 ವರ್ಷ ನಂತರ ನನಗೆ ಅದರ ವಿಚಾರಗಳ

ಬಗ್ಗೆ ತಿಳಿಯಿತು. ನಾನು ದೊಡ್ಡವನಾದ ಮೇಲೆ ದಾವಾ ಆಸ್ತಿಗೆ ಸಂಬಂಧಪಟ್ಟ ವಿಚಾರಗಳು ಮತ್ತು ದರ್ಖಾಸು ವ್ಯವಹರಣೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. 1990ನೇ ಇಸವಿಯಲ್ಲಿ ನನ್ನ ತಂದೆ ಹೇಗೆ ಸಹಿ ಮಾಡುತ್ತಿದ್ದರು ಎಂದು ನನಗೆ ಗೊತ್ತು. 1990ನೇ ಇಸವಿಯಲ್ಲಿ ನನ್ನ ತಂದೆ ಸಹಿ ಮಾಡಿದ್ದನ್ನು ನಾನು ನೋಡಿದ್ದೇನೆ. 1983 ನೇ ಇಸವಿಯಲ್ಲಿ ನಾನು ಹುಟ್ಟಿರುತ್ತೇನೆ. ನನ್ನ ತಂದೆಗೆ ಯಾವ ಇಸವಿಯಲ್ಲಿ ದಾವಾ ಜಾಗ ದರ್ಖಾಸು ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಮಂಜೂರಾತಿ ಆಗುವ ವ್ಯವಹರಣೆಯನ್ನು ನನ್ನ ತಂದೆ ಯಾವ ರೀತಿ ಸಹಿ ಹಾಕಿದ್ದರು ಎಂದು ನನಗೆ ಗೊತ್ತು. ಕೇಸು ದಾಖಲಿಸುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ನಾನು ತಾಲೂಕು ಕಚೇರಿಯಿಂದ ಪಡೆದುಕೊಂಡಿಲ್ಲ. ನನ್ನ ತಂದೆ ಪಡೆದುಕೊಂಡಿರಬಹುದು. ನಿ.ಡಿ.6 ರಲ್ಲಿ ಬರೆದಿರುವ ಡಿ.ಆರ್ ನಂ. 5193 ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಾ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ.

ಮುಖ್ಯವಿಚಾರಣೆಯ ಪ್ರಮಾಣಪತ್ರಕ್ಕೆ ಅನುಭವವನ್ನು ನಾನೇ ನೀಡಿರುತ್ತೇನೆ. ಮುಖ್ಯ ವಿಚಾರಣೆಯ ಪ್ರಮಾಣಪತ್ರದ 3ನೇ ಪ್ಯಾರಾದಲ್ಲಿ ಆದೇಶ ತಾರೀಖು 15-10-1987 ಬರೆದಿದ್ದು ಸರಿಯಾ ಅಥವಾ ತಪ್ಪಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯ **ODR** **5193/1971-72** ವಕೀಲರ ಹತ್ತಿರ ದಾಖಲೆ ನೀಡಿ ಬರೆಸಿದೆ. ಈ ಸಮಯದಲ್ಲಿ ಸಾಕ್ಷಿಗೆ ಸಾಗುವಳಿ ಚೀಟಿ ತೋರಿಸಿದ್ದು ಅದನ್ನು ನೋಡಿ ಸಾಕ್ಷಿಯು ಅದನ್ನು ನೋಡಿ ಬರೆಸಿದ್ದೇನೆ ಎಂದು ನುಡಿದಿದ್ದು ಅದರಂತೆ ಸದರಿ ಸಾಗುವಳಿ ಚೀಟಿಯನ್ನು ನಿ.ಡಿ.17 ಎಂದು ಗುರುತಿಸಲಾಯಿತು. ನಿ.ಡಿ.17 ರ ನಕಲನ್ನು ಮುಖ್ಯ ವಿಚಾರಣೆಯನ್ನು ಸಲ್ಲಿಸುವ ಕಾಲಕ್ಕೆ ನನ್ನ ವಕೀಲರಿಗೆ ನೀಡಿಲ್ಲ. ನನ್ನ ತಂದೆಯವರು ಅದನ್ನು ಕೊಟ್ಟಿದ್ದಾರೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಿ.ಡಿ.17 ರ ನಕಲು ಕಂಡು ಬರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸದೇ ಇರಲು ಯಾವುದೇ ಕಾರಣ ಇಲ್ಲ. ದರ್ಖಾಸು ವ್ಯವಹರಣೆಗೆ ಸಂಬಂಧಪಟ್ಟಂತೆ ನನ್ನ ಬಳಿ ಸಾಗುವಳಿ ಚೀಟಿ, ನಕ್ಷೆ ಮತ್ತು ರಶೀದಿ ಮಾತ್ರ ಇರುವುದು. ಸದರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ

ಎಂದರೆ ಸಾಕ್ಷಿಯು ಸದರಿ ದಾಖಲೆಯು ಎಲ್ಲಿದೆ ಎಂದು ಗೊತ್ತಿಲ್ಲ. **ODR** 5193/1971-72 ತಂದೆ ಇರುವಾಗ ಹಾಕಿದ್ದು. ನಾನು ಸಲ್ಲಿಸಿರುವ ಪ್ರಮಾಣಪತ್ರವನ್ನು ತಂದೆ ಇರುವಾಗ ಸಲ್ಲಿಸಿದ್ದು. ನಾನು ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರಗಳು ಸತ್ಯವಾಗಿತ್ತು. ಅದರ ಮಾಹಿತಿ ನನಗೆ ತಿಳಿದಿತ್ತು. ಸದರಿ **ODR** ನಂಬರ್ ಡಿ ನೋಟೀಸನಲ್ಲಿ ಬರೆಯಲಾಗಿತ್ತು. ಸದರಿ ಡಿ ನೋಟೀಸನ್ನು ತಂದೆಯವರು 2015 ರಲ್ಲಿ ವಕೀಲರಿಗೆ ನೀಡಿದ್ದರು. ಡಿ ನೋಟೀಸನ್ನು ಬಿಟ್ಟು ಬೇರೆ ಯಾವುದು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸುವ ಕಾಲಕ್ಕೆ ನನ್ನ ತಂದೆಯ ಜೊತೆ ಬಂದಿದ್ದೆ. ಸಾಕ್ಷಿಗೆ ಕೆಲವು ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ **ODR** 5193/1971-72 ವ್ಯವಹರಣೆಗೆ ಸಂಬಂಧಪಟ್ಟ ದಾಖಲೆಗಳು ಆಗಿದ್ದು ಎಂದು ಹೇಳಿದ್ದು ಅದನ್ನು ಸಾಕ್ಷಿ ಹೌದು ಎಂದು ಗುರುತಿಸಿದ್ದು ಅದರಂತೆ ಸದರಿ ದಾಖಲೆಗಳನ್ನು ನಿ.ಡಿ.18 ರಿಂದ 24 ಎಂದು ಗುರುತಿಸಲಾಯಿತು. (ನಿಡಿ.18 ರಿಂದ 24ರ ದಾಖಲೆಗಳನ್ನು ವಾದಿ ಪರ ವಕೀಲರು ಈ ನ್ಯಾಯಾಲಯವು ಮಧ್ಯಂತರ ಮಾಡಿದ ಆದೇಶಕ್ಕೆ ವ್ಯತಿರಿಕ್ತವಾಗಿ ಹಾಜರುಪಡಿಸಿದ್ದು ಎಂದು ಆಕ್ಷೇಪಣೆ ಮಾಡಿದ್ದು ಸದರಿ ಆಕ್ಷೇಪಣೆಗೆ ಒಳಪಟ್ಟು ಗುರುತಿಸಲಾಯಿತು.)

ನಿಮ್ಮ ವಕೀಲರಿಗೆ ನೀಡಿದ ಸಾಗುವಳಿ ಚೀಟಿಯನ್ನು ನಿಮ್ಮ ತಂದೆಯ ಸಹಿ ಇದ್ದಿತ್ತಾ ಎಂದರೆ ಸಾಕ್ಷಿಯು ನಾನು ಸಹಿ ನೋಡಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.8 ಮತ್ತು 12, ಮತ್ತು ನಿ.ಡಿ.16 ರಿಂದ 24 ರಲ್ಲಿ ಕಂಡು ಬರುವ ಸಹಿಗಳನ್ನು ಕಂಪಾರಿಸನ್ ಗೆ ಕಳುಹಿಸಲು ಆಕ್ಷೇಪಣೆ ಇಲ್ಲ. ಸಹಿಗಳು ವರ್ಷ ಹೋದಾ ಹಾಗೆ ಒಂದೇ ರೀತಿ ಇರುತ್ತದೆ. ನನ್ನ ತಂದೆಯವರು ದರ್ಖಾಸು ಮಂಜೂರಾತಿ ವ್ಯವಹರಣೆಗೆ ತಾಲೂಕು ಕಚೇರಿಗೆ ಹೋಗುತ್ತಿದ್ದಾರಾ ಎಂದರೆ ಸಾಕ್ಷಿ ನನಗೆ ಆ ಸಮಯ 4 ವರ್ಷ ಎಂದು ನುಡಿಯುತ್ತಾರೆ. ಆ ಬಗ್ಗೆ ನನಗೆ ಗೊತ್ತಿಲ್ಲ.

ನಿ.ಡಿ.24 ರಲ್ಲಿ ಕಂಡು ಬರುವ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಅದು ನಿಮ್ಮ ತಂದೆಯ ಸಹಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ. ನಿ.ಡಿ.16 ಮತ್ತು 17

ರಲ್ಲಿ ಕಂಡು ಬರುವ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಅದು ನಿಮ್ಮ ತಂದೆಯ ಸಹಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ. ನಿ.ಡಿ.8 ಮತ್ತು 12 ಕಂಡು ಬರುವ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಅದು ನಿಮ್ಮ ತಂದೆಯ ಸಹಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುವ ಅಭ್ಯಾಸ ಇತ್ತಾ ಎಂದರೆ ಸಾಕ್ಷಿಯು ಇಂಗ್ಲೀಷ್ ನಲ್ಲಿ ಮಾತ್ರ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ವಕಲಾತ್ತು ನಾಮೆಯಲ್ಲಿ ಮತ್ತು ದಾವಾ ಪತ್ರದಲ್ಲಿ ಉದ್ದೇಶಪೂರ್ವಕವಾಗಿ ತಿರುಚಿ ಸಹಿ ಹಾಕಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಪೂರ್ಣ ಹೆಸರು ಕಾಶ್ಮೀರ ಡಿ ಸೋಜಾ **S/o** ಮುರ್ತಿನ್ ಡಿ ಸೋಜಾ ಆಗಿರುತ್ತದೆ. ಕೆಲವು ಕಡೆಯಲ್ಲಿ ಕಾಶ್ಮಿರ ಸೋಜಾ ಎಂದು ಬರೆದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಗೆ ಡಿ ಬಿಟ್ಟು ಹೋಗಿರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಯಾವ ಯಾವ ಸಹಿಗಳನ್ನು ಹಾಕುತ್ತಿದ್ದರು ಎಂಬ ವಿಚಾರಗಳು ಬೆಳಕಿಗೆ ಬರುತ್ತದೆ ಎಂಬ ಕಾರಣಕ್ಕಾಗಿ ಉದ್ದೇಶಪೂರ್ವಕವಾಗಿ ನಿ.ಡಿ.16 ರಿಂದ 24 ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಡಿ.8 ಮತ್ತು 12 ಆಗುವ ಕಾಲಕ್ಕೆ ನಿ.ಡಿ.6 ನ್ನು ನನ್ನ ತಂದೆಯವರು ಕೊಟ್ಟಿದ್ದರು ಎಂದರೆ ಸರಿಯಲ್ಲ. (ವಾದಿ ಪರ ವಕೀಲರು ಸದರಿ ಪ್ರಶ್ನೆಯನ್ನು ಕಾಂಪೌಂಡು ಪ್ರಶ್ನೆ ಎಂದು ಹೇಳಿ ನಿ.ಡಿ.8 ಮತ್ತು 12 ನ್ನು ವಾದಿಯು ಪೂರ್ತಿಯಾಗಿ ಅಲ್ಲಗಳೆದಿದ್ದು ಎಂದು ತಕರಾರು ಎತ್ತಿದ್ದು ಅದರಂತೆ ಸದರಿ ತಕರಾರಿಗೆ ಒಳಪಟ್ಟು ಪ್ರಶ್ನೆಯನ್ನು ದಾಖಲೆಸಿಕೊಳ್ಳಲಾಯಿತು.) ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.

O.S. No: 336/2016
P.W:1